O.S **06/2020**

D.W.3

ಸಾಕ್ಷಿಯನ್ನು ದಿಃ 03-06-2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಬಿ.ಎನ್.ಎಸ್. ವಾದಿ ಪರ ವಕೀಲರಿಂದ

ವಾದಿ ಮತ್ತು ಪ್ರತಿವಾದಿ ನಂ. 1 ಮತ್ತು 2 ರವರ ತಂದೆಯನ್ನು ನಾನು ನೋಡಿರುವುದಿಲ್ಲ. ನನಗೆ ಈಗ ಸುಮಾರು 45 ವರ್ಷಗಳು ಆಗಿರುತ್ತದೆ. ವಾದಿ ಮತ್ತು ಪ್ರತಿವಾದಿಯರ ಒಟ್ಟು ಕುಟುಂಬದ ಆಸ್ತಿಯಲ್ಲಿ ನಾನು ಭಾಗವಹಿಸಿರುವುದಿಲ್ಲ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಚಕಬಂದಿ ನನಗೆ ಹೇಳಲು ಆಗುವುದಿಲ್ಲ. ನನ್ನ ಜಮೀನು ಸರ್ವೆ ನಂ. 129 ರ ಪಕ್ಕದಲ್ಲಿ ಇರುತ್ತದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಬರೆಯಲು ನನಗೆ ಮಾಹಿತಿ ನಾನೇ ನೀಡಿದ್ದು ಅದರಲ್ಲಿರುವ ವಿಚಾರಗಳ ಬಗ್ಗೆ ನನಗೆ ನೆನಪಿರುವುದಿಲ್ಲ. ಸುರೇಶನ ತಂದೆ ಶಂಕ್ರಪ್ಪನಿಗೆ ಶಿವಪ್ಪ , ಹಾಲಪ್ಪ, ಬಸವಣ್ಣೆಪ್ಪ, ಕಲ್ಲಪ್ಪ ಎಂಬ ಸಹೋದರರು ಇರುತ್ತಾರೆ. ದಿಃ 24.11.1983 ಯಲ್ಲಿ ಆದ ಅಪಸಾತ ವಾಟ್ನಿಯಲ್ಲಿ ನಾನು ಭಾಗವಹಿಸಿರುವುದಿಲ್ಲ. ಅದಕ್ಕೆ ಸಂಬಂದಪಟ್ಟ ಕಾಗದ ಪತ್ರಗಳನ್ನು ನಾನು ನೋಡಿರುವುದಿಲ್ಲ 3 ನೇ ಪ್ರತಿವಾದಿಯು ಗದಗಿನಲ್ಲಿ ಅವರ ಮಗಳ ಬಳಿ ಇರುತ್ತಾಳೆಂದರೆ ಸಾಕ್ಷಿಯು ಹೆಬ್ಬಾಳದಲ್ಲಿ ಇರುತ್ತಾಳೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯು ತನ್ನ ತಾಯಿಯ ಆರೈಕೆ ಮಾಡುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ದಾವಾ ಆಸ್ತಿಗಳಲ್ಲಿ ಹಕ್ಕು ಇರುತ್ತದೆ ಎಂದರೆ ಸರಿ.ಪ್ರತಿವಾದಿಯರ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ

ಮರು ವಿಚಾರಣೆ ಇಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇ ಕೇ ಸರಿ ಅದೆ.

sd/-03.06.2026

ಹಿರಿಯ ದಿವಾಣಿ ನ್ಯಾಯಾಧೀಶರು

ಸಾಕ್ಷಿದಾರರ ಸಹಿಃ sd/-

ಹಾಗೂ ಪ್ರ.ದ.ನ್ಯಾದಂ. ಲಕ್ಷ್ಮೇಶ್ವರ